C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ঃ 256/2019

**ಚಾ.ಸಾ.–13 ಫ್ರಾ.ಸಾ.–08**

| | |
|---|---|
| **ಸಾಕ್ಷಿದಾರರ ಹೆಸರು** | **ಮಹದೇವು ಎಂ.** |
| **ತಂದೆಯ ಹೆಸರು** | **ಮಾದಯ್ಯ** |
| **ವಯಸ್ಸು** | **52 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ದೊಡ್ಡಮಲಗೂಡು ಗ್ರಾಮ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ** |

**ದಿನಾಂಕಃ 23.12.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1 ನನ್ನ ಬಾಮೈದ. ಚಾಸಾ- 2 ಮತ್ತು 3 ಅವರ ಮಕ್ಕಳು. ಚಾಸಾ- 4 ಅವರ ಹೆಂಡತಿ. ಚಾಸಾ- 5 ನನ್ನ ಅತ್ತಿಗೆ. ಚಾಸಾ- 6 ನನ್ನ ಅಜ್ಜಿ. ಚಾಸಾ- 7 ನನ್ನ ದೊಡ್ಡಮ್ಮ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. .

2) ಈ ದಿನ ನ್ಯಾಯಾಲಯದ ಮುಂದಿರುವ 1, 3 ರಿಂದ 12 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 and 3 to 12 in the dock). 2ನೇ ಆರೋಪಿಯ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.2). 4 ಮತ್ತು 11

ನೇ ಆರೋಪಿತರು ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು. 7ನೇ ಆರೋಪಿ ವಿಶ್ವಕರ್ಮ ಜಾತಿಗೆ ಸೇರಿದವರು. ಉಳಿದವರು ಒಕ್ಕಲಿಗ ಜಾತಿಗೆ ಸೇರಿದವರು.

3) ನನಗೆ ಈಗ ತೋರಿಸಿದ ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.6(ಬಿ)** ಎಂದು ಗುರುತಿಸಲಾಗಿದೆ. ನನಗೆ ಈಗ ತೋರಿಸಿದ ನಿಪಿ–7 ಪೋಟೋವಿನಲ್ಲಿ ನಾನು ಕಂಡುಬರುತ್ತೇನೆ. ನಿಪಿ–7 ಪೋಟೋವನ್ನು ಡಿ.ವೈ.ಎಸ್.ಪಿ ಕಛೇರಿಯಲ್ಲಿ ತೆಗೆದಿರುತ್ತಾರೆ. ಗಲಾಟೆಯಾದ 4 – 5 ದಿನಗಳ ನಂತರ ನಿಪಿ–7 ಪೋಟೋವನ್ನು ತೆಗೆದಿರುತ್ತಾರೆ. ಆ ದಿನ ಠಾಣೆಗೆ ದೂರುಕೊಡಲು ಹೋಗಿದ್ದೆವು. ಪೋಲೀಸರು ದೂರನ್ನು ಸ್ವೀಕರಿಸಿ ಪೋಟೋವನ್ನು ತೆಗೆದರು. ನನ್ನ ಸಮಕ್ಷಮ ಪೋಲೀಸರಿಗೆ ಯಾವುದೇ ದಾಖಲೆಯನ್ನು ಯಾರು ನೀಡಿರುವುದಿಲ್ಲ. ನಿಪಿ–6 ದಾಖಲೆಯಲ್ಲಿ ಗಲಾಟೆಯಾದ ಬಗ್ಗೆ ಬರೆದಿರುತ್ತಾರೆ. ಇದ್ದಲ್ಲದೆ ಬೇರೆ ಪೋಟೋಗಳು ಮತ್ತು ಡಿವಿಡಿಯನ್ನು ನಾನು ನೋಡಿರುವುದಿಲ್ಲ. ನಿಪಿ–8 ಪೋಟೋಗಳು ಮತ್ತು ನಿಪಿ–9 ಡಿವಿಡಿಯನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ನಿಪಿ–6 ಮಹಜರಿನ ಪ್ರಕಾರ ಪೋಲೀಸರು ಯಾವುದಾದರೂ ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

4) ದಿಃ05.09.2019 ರಂದು ತನಿಖಾಧಿಕಾರಿಗಳು ಡಿ.ವೈ.ಎಸ್.ಪಿ ಕಛೇರಿಗೆ ನನ್ನನ್ನು ಕರೆಸಿದ್ದರು ಎಂದರೆ ಸರಿ. ಆ ಸಮಯ ಚಾಸಾ- 3 ರವರು ಪೋಲೀಸರಿಗೆ ಗಲಾಟೆ ಸಮಯದಲ್ಲಿ ತಾನು ತೆಗೆದಿರುತ್ತಾರೆ ಎನ್ನುವ 30 ಪೋಟೋಗಳು ಮತ್ತು ಅವರ ಮೋಬೈಲ್ ಫೋನನ್ನು ಪೋಲೀಸರ ಮುಂದೆ ಹಾಜರುಪಡಿಸಿದ್ದರು ಎಂದರೆ ಸರಿ. ಆ ಸಮಯ ಸದರಿ ಮೋಬೈಲ್ ಫೋನಿನಲ್ಲಿ ಇದ್ದ ದೃಶ್ಯಗಳನ್ನು ಡಿವಿಡಿಗೆ ಪೋಲೀಸರು

ವರ್ಗಾಯಿಸಿದರು ಎಂದರೆ ಸರಿ. ಆ ಸಮಯ ನಿಪಿ–8 30 ಪೋಟೋಗಳು ಮತ್ತು ನಿಪಿ–9 ಡಿವಿಡಿಯನ್ನು ಪೋಲೀಸರು ವಶಕ್ಕೆ ಪಡೆದುಕೊಂಡರು ಎಂದರೆ ಸರಿ. ಆ ಸಮಯ ನಿಪಿ–6 ಮಹಜರನ್ನು ಜರುಗಿಸಿದರು ಎಂದರೆ ಸರಿ. ಆ ಸಮಯ ನಾನು ಮತ್ತು ಚಾಸಾ- 12 ರವರು ಸದರಿ ಮಹಜರಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮಹಜರ್ ಜರುಗಿಸುವ ಸಮಯ ನಿಪಿ–7 ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿ. ಆ ಸಮಯ ನಾನು ನಿಪಿ–8 ಪೋಟೋಗಳು ಹಾಗೂ ನಿಪಿ–9 ಡಿವಿಡಿಯನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದಃ**

5) ಆ ದಿನ ಠಾಣೆಗೆ ಹೋಗಬೇಕೆಂದು ಚಾಸಾ- 3 ರಾಜೇಶ್ವರಿ ನನಗೆ ಹೇಳಿರುತ್ತಾರೆ. ಪೋಲೀಸರು ಖುದ್ದಾಗಿ ಠಾಣೆಗೆ ಬರಲು ತಿಳಿಸಿರಲಿಲ್ಲ. ಪೋಲೀಸ್ ಠಾಣೆಯಿಂದ ನಮ್ಮ ಊರು ಸುಮಾರು 12 ಕಿಮಿ ದೂರ ಇದೆ. ನಿಪಿ–8 ಪೋಟೋಗಳನ್ನು ಚಾಸಾ- 3 ರವರು ಠಾಣೆಗೆ ತಂದಿರುತ್ತಾರೆ. ನಾನು ಮತ್ತು ಚಾಸಾ- 3 ರವರು ಠಾಣೆಗೆ ಹೋಗುವಾಗಲೇ ಚಾಸಾ-3 ರವರು ನಿಪಿ–8 ಪೋಟೋಗಳನ್ನು ತೆಗೆದುಕೊಂಡು ಹೋಗಿದ್ದರು. ಚಾಸಾ-3 ರವರ ಮೋಬೈಲ್ ಫೋನನ್ನು ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ. ನಿಪಿ–8 ಪೋಟೋಗಳನ್ನು ಠಾಣೆಗೆ ಹೋಗುವ ಪೂರ್ವದಲ್ಲಿಯೇ ನೋಡಿರುತ್ತೇನೆ. ಸದರಿ ಪೋಟೋಗಳನ್ನು ಪ್ರಿಂಟ್ ಮಾಡಲು ಚಾಸಾ- 3 ರವರ ಜೊತೆ ನಾನು ಹೋಗಿರುತ್ತೇನೆ. ಪೋಲೀಸರು ನಿಪಿ–8 ಪೋಟೋಗಳನ್ನು ಪ್ರಿಂಟ್ ಮಾಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೋಲೀಸರು ಚಾಸಾ- 3 ರವರ ಮೋಬೈಲ್ ಫೋನನ್ನು ಪಡೆದುಕೊಂಡು ಅದರಲ್ಲಿದ್ದ ದೃಶ್ಯಗಳನ್ನು ಡಿವಿಡಿಗೆ ವರ್ಗಾಯಿಸಿರುವುದಿಲ್ಲ, ಅದರಿಂದ ಪೋಟೋಗಳನ್ನು ತೆಗೆದು ಪ್ರಿಂಟ್ ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ- 1 ರವರು ನನ್ನ ಸಂಬಂದಿಕರಾಗಿದ್ದರಿಂದ ನನಗೆಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಾ ಅವರ ಒತ್ತಡಕ್ಕೆ ಮಣಿದು ನಿಪಿ–6 ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತರ ಪರಿಚಯ ನನಗೆ ಇರುವುದೇ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

6) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ